# ಹರಿಕಥಾ ಶ್ರವಣಕ್ಕೆ ಮನವಿಟ್ಟ ಪ್ರೌಢ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 143
2. **Ref.:** Samagra Dasa Sahity, Samputa 4, published by Kannada & Culture Dept, Govt of Karnataka, Bengaluru, page No. 11.
3. **Ref.:** Purandara Chintanaa Lahari, Edited by Sri. M.B. Shyamachar, Publisher: Sri Srinivasa Utsava Balaga, Bengaluru – 19, page No. 92.
4. **Note:** The wordings in both the references are same and the singer has followed these wordings.

ಹರಿಕಥಾ ಶ್ರವಣಕ್ಕೆ ಮನವಿಟ್ಟ ಪ್ರೌಢ
ಅರವತ್ತು ಘಳಿಗೆಗಳ ವ್ಯರ್ಥ ಹೋಗಾಡ
ಪರಮ ಪದವಿಗೆ ಐದುವನವನೆ ಗಡ
ನರಕದ ಬಟ್ಟೆ ದೂರದಲೊಮ್ಮೆ ನೋಡ
ಪುರಂದರ ವಿಠಲನಂಘ್ರಿ ಗಾಢ–
ತರದಲಪ್ಪುವ ಮೈಮರೆದು ಮಾತಾಡ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಪ್ರೌಢ** = ಜ್ಞಾನಿಯಾದ ಭಕ್ತ

**ಪರಮ ಪದವಿ** = ಮುಕ್ತಿ

**ಬಟ್ಟೆ** = ದಾರಿ

**ಗಡ** = ಸಹಜವಾಗಿ, ನಿಜ, ನಿಶ್ಚಿತ, ತ್ವರಿತವಾಗಿ, ಬೇಗ ಬೇಗನೆ

**ಗಾಢ** = **ಗಾಡ** = ಗಟ್ಟಿಯಾಗಿ, ನಿಜವಾಗಿ

**ಹೋಗಾಡ** = ಬಿಡುವುದಿಲ್ಲ

**ವ್ಯಾಖ್ಯಾನ:** "ಹರಿಕಥಾ ಶ್ರಾವಣ ಮಾಡೊ ನಿರಂತರ" ಎಂದ ದಾಸರು ಇಲ್ಲಿ ಹರಿಕಥಾ "ಶ್ರವಣ" ಎಂಬ ಭಕ್ತಿಗೆ ಮನವಿಟ್ಟವನು ಜನ್ಮವನ್ನು ವ್ಯರ್ಥವನ್ನಾಗಿಸದೆ ಸಾಧನೆಗಳನ್ನು ಪೂರೈಸಿಕೊಳ್ಳುವ ಎಂದರು. ನಂತರ ಪರಮ ಪದವಿ ಎಂದರೆ ಭಾವಂತನ ಸಾನಿಧ್ಯವನ್ನು ಪಡೆದು ನಿತ್ಯ ಸುಖವನ್ನು ಪಡೆಯುವನು ಎಂದು ಹೇಳಿದರು. ಹರಿಕಥಾ ಶ್ರವಣವು ಸಾಧನೆಯ ಮೊದಲ ಸೋಪಾನವಾಗಿದೆ. ನಿರಂತರ ನಡೆಯಬೇಕಾದ ಸಾಧನವು ಆಗಿದೆ. ಅದಕ್ಕೆ ಶ್ರೀಪಾದರಾಜರು 'ವಿಶಾಲ ಕರ್ಣಕೆ ಭೂಷಣ ವಿಷ್ಣು ಕಥೆಯು' ಎಂದರು. ಇಲ್ಲಿ ದಾಸರು ದಿನವನ್ನು ವ್ಯರ್ಥಗೊಳಿಸದೆ ಪರೀಕ್ಷಿತ ಶ್ರವಣ ಮಾಡಿದಂತೆ ಮಾಡಿದಲ್ಲಿ ನರಕದ ಬಟ್ಟೆ (ಹಾದಿ) ಯನ್ನು ನೋಡ ಎಂದರು. ಅಲ್ಲದೆ ಭಗವಂತನ ಪಾದಗಳನ್ನು ಗಾಢ (ಅತಿಶಯವಾಗಿ) ವೇಗದಿ ಪಡೆಯುವ. ಇಂತಹವನು ಪರಮ ಪದವಿಯನ್ನು ಪಡೆಯುವ ಎಂದು ಸೂಚಿಸಿದರು.

**Classification:** Ugabhoga
**Ankita:** purandara vittala
**Location:** NA
**Category:** Bhakti, Devata Stuti
**Sub-Category:** Krishna, mana, naraka, harikatha,
**Pravachana:** NA
**Explanation:** NA